೧೨ ಅಪರಾಹ್ನ(ವಾಷಿಂಗ್ಟನ್, ಡಿ.ಸಿ.ಸಮಯ) ಸೆಪ್ಟೆಂಬರ್
೨೮, ೨೦೦೪ರ ತನಕ ನ್ಯೂಸ್ ವಯರ್
ಟ್ರಾನ್ಸ್ಮಿಶನ್‌ಗಾಗಿ, ವೆಬ್‌ಸೈಟ್‌ಗಳಿಗಾಗಿ, ಅಥವಾ
ಮೀಡಿಯಾ ಉಪಯೋಗಕ್ಕಾಗಿ ಅಲ್ಲ.

# ವಿಶ್ವ ಬ್ಯಾಂಕ್

ಸುದ್ದಿ ಬಿಡುಗಡೆ 2004/89/S

ಸಂಪರ್ಕಗಳು:
ಕ್ರಿಸ್ಟೋಫರ್ ನೀಲ್
(202) 473-7229
Cneal1@worldbank.org
ಸಿಂಥಿಯ ಕೇಸ್(ಟಿವಿ/ರೇಡಿಯೊ)
(202) 473-2243
Ccase@worldbank.org
ಎರಿಕ್ ನೋರಾ
(202) 458 4735
enora@worldbank.org

## ನೀತಿ ಸಂಬಂಧಿತ ಅಪಾಯಗಳು, ವೆಚ್ಚ ಮತ್ತು ಸ್ಪರ್ಧಾತ್ಮಕತೆಗೆ ಇರುವ ಅಡೆತಡೆಗಳನ್ನು ಗೌಣವಾಗಿಸುವುದೇ ಹೆಚ್ಚಿನ ಅಭಿವೃದ್ಧಿ, ಬಡತನ ನಿರ್ಮೂಲನೆಗೆ ಮುಖ್ಯ ಅಂಶ :

**ವಾಷಿಂಗ್ಟನ್,** ಸೆಪ್ಟೆಂಬರ್ ೨೮, ೨೦೦೪ — ಆರ್ಥಿಕ ಅಭಿವೃದ್ಧಿ ಹೆಚ್ಚಳ ಹಾಗೂ ಬಡತನ ನಿರ್ಮೂಲನೆಗೆ ಸರಕಾರಗಳು, ನೀತಿ ಸಂಬಂಧಿತ ಅಪಾಯಗಳು, ವೆಚ್ಚ ಮತ್ತು ಸ್ಪರ್ಧಾತ್ಮಕತೆಗೆ ಇರುವ ಅಡೆತಡೆಗಳನ್ನು ಕಡಿಮೆಗೊಳಿಸಬೇಕಾಗಿದೆ. ರೈತರು ಮತ್ತುಸ ಣ್ಣ ಉದ್ಯಮಗಳು ಮಾತ್ರವಲ್ಲದೆ ಸ್ಥಳೀಯ ಉತ್ಪಾದಕ ಕೈಗಾರಿಕೆಗಳು ಮತ್ತು ಬಹು ರಾಷ್ಟ್ರೀಯ ಕಂಪೆನಿಗಳಿಗೆ ಸಂಬಂಧಿಸಿದಂತೆಯೂ ಈ ಬಗೆಯ ಕ್ರಮದ ಅವಶ್ಯಕತೆ ಇದೆ ಎಂದು ಇಂದು ಬಿಡುಗಡೆಗೊಂಡ ಜಾಗತಿಕ ಬ್ಯಾಂಕ್‌ನ 'ವಿಶ್ವ ಅಭಿವೃದ್ಧಿ ವರದಿ –೨೦೦೫'ರಲ್ಲಿ ದಾಖಲಿಸಲಾಗಿದೆ.

ವರದಿಯನ್ನು ಮಂಡಿಸುತ್ತ, ವಿಶ್ವಬ್ಯಾಂಕ್‌ನ ಉಪಾಧ್ಯಕ್ಷ ಮತ್ತು ಪ್ರಧಾನ ಆರ್ಥಿಕ ತಜ್ಞ ಫ್ರಾಂಕಾಯಸ್ ಬೂರ್ಗಿನನ್, – ಆರ್ಥಿಕ ಅಭಿವೃದ್ದಿ ಮತ್ತು ಬಡತನ ನಿರ್ಮೂಲನೆಗೆ, ಬಂಡವಾಳ ಹೂಡಿಕೆಗೆ ಉತ್ತಮ ವಾತಾವರಣ ಕಲ್ಪಿಸುವುದೇ ಕೇಂದ್ರ ಬಿಂದುವಾಗಿದೆ,– ಎಂದು ಅಭಿಪ್ರಾಯ ಪಟ್ಟಿದ್ದಾರೆ. 'ಕ್ರಿಯಾಶೀಲ ಖಾಸಗಿ ವಲಯ ಉದ್ಯೋಗ ವಸ್ತು ಮತ್ತು ಸೇವೆಗಳನ್ನು ನಿರ್ಮಿಸಬಲ್ಲುದು. ಉತ್ತಮ ಜೀವನ ಶೈಲಿಗೆ ಇವುಗಳ ಅವಶ್ಯಕತೆ ಇದೆ. ಇದು ಆರೋಗ್ಯ, ಶಿಕ್ಷಣ ಮತ್ತು ಇತರೆ ಅವಶ್ಯಕ ಸೇವೆಗಳ ಬಂಡವಾಳಕ್ಕೆ ಅಗತ್ಯವಾದ ತೆರಿಗೆ ಸಂಗ್ರಹಕ್ಕೂ ಪೂರಕವಾಗಬಲ್ಲುದು. ಆದರೆ ಅನೇಕ ಬಾರಿ ಸರಕಾರಗಳು ಈ ಕೊಡುಗೆಗಳನ್ನು (ತೆರಿಗೆ ಸಂಗ್ರಹ) ಅಸಮರ್ಥನೀಯ ಕಾರ್ಯಕ್ರಮಗಳು, ವೆಚ್ಚ ಮತ್ತು ಮುಕ್ತ ಸ್ಪರ್ಧೆಗೆ ಅಡೆತಡೆ ಒಡ್ಡುವಂತಹ ಕ್ರಮಗಳಲ್ಲಿ ತೊಡಗಿಸುತ್ತವೆ.'

"ಪ್ರತಿಯೊಬ್ಬರಿಗಾಗಿ ಉತ್ತಮ ಬಂಡವಾಳ ಹೂಡಿಕೆಯ ವಾತಾವರಣ" ಎಂಬ ಈ ವರದಿಯು ೫೩ ಅಭಿವೃದ್ಧಿಶೀಲ ದೇಶಗಳಲ್ಲಿನ ೩೦೦೦೦ಕ್ಕೂ ಹೆಚ್ಚಿನ ಕೈಗಾರಿಕ ಘಟಕಗಳೊಡನೆ ನಡೆಸಿದ ಸಮೀಕ್ಷೆಯ ಮೇಲೆ ಆಧಾರಗೊಂಡಿದೆ. ದೇಶದಲ್ಲಿ ನಡೆದ ಮಾದರಿ ಅಧ್ಯಯನಗಳು, ವಿಶ್ವಬ್ಯಾಂಕಿನ " ಡೂಯಿಂಗ್ ಬ್ಯುಸಿನೆಸ್ ಡಾಟಾಬೇಸ್" ಮತ್ತು ನವ ಸಂಶೋಧನೆಗಳಿಂದ ಈ ವರದಿ ತಯಾರಿಸಲಾಗಿದೆ ವರದಿಯಲ್ಲಿ ಬಂಡವಾಳ ಹೂಡಿಕೆ ನಿರ್ಮಾಣಕ್ಕ ಅಗತ್ಯವಾದ ವಾತಾವರಣ ಸುಧಾರಿಸಲು ಸರಕಾರಗಳಿಗಿರುವ  ಅವಕಾಶಘಳನ್ನು ಎತ್ತಿ ತೋರಲಾಗಿದೆ. ಅಗತ್ಯ ವಾತಾವರಣವನ್ನು ಎಲ್ಲ ಬಗೆಯ ಕೈಗಾರಿಕೆ ಘಟಕಗಳು ಉದ್ಯೋಗ ಸೃಷ್ಟಿ, ವಿಸ್ತರಣೆ ಹಾಗೂ ದಕ್ಷ ಉತ್ಪಾದಕ ರೀತಿಯ ಬಂಡವಾಳ ಹೂಡಲು ಅವಕಾಶ ಮತ್ತ ಉತ್ತೇಜನ ನೀಡುವ ಮೂಲಕ ಸಾಧಿಸಬಹುದಾಗಿದೆ.

ಅಭಿವೃದ್ಧಿಶೀಲ ದೇಶಗಳಲ್ಲಿನ ಕೈಗಾರಿಕ ಘಟಕಗಳನ್ನು ಕಾಡುವ ಮುಖ್ಯ ಸಂಗತಿ ಎಂದರೆ ನೀತಿ–ಸಂಬಂಧಿತ ಅಪಾಯಗಳು. ಸರಕಾರದ ನೀತಿಗಳಲ್ಲಿ ಅಡಕವಾಗಿರುವ ಅಂಶಗಳು ಮತ್ತು ಅವುಗಳ ಅನುಷ್ಠಾನಕ್ಕೆ ಸಂಬಂಧಿಸಿದ ಅಸ್ಥಿರತೆ ಹೆಚ್ಚಿನ ಕಳವಳವನ್ನು ಉಂಟು ಮಾಡುತ್ತದೆ. ಇದರ ಜೊತೆಗೆ ಪ್ರಮುಖ ಅಪಾಯಗಳೆಂದರೆ, ಸ್ಥೂಲ ಆರ್ಥಿಕ ಸಂಬಂಧಿ ಅಸ್ಥಿರತೆ, ನಿರಂಕುಶ ನಿಯಂತ್ರಣ ಹಾಗೂ ಆಸ್ತಿ ಹಕ್ಕುಗಳ ದುರ್ಬಲ ರಕ್ಷಣೆ. ಈ ಅಪಾಯಗಳಿಂದಾಗಿ ಬಂಡವಾಳದ ಉತ್ಪಾದಕ ಹೂಡಿಕೆ ಮತ್ತು ಉದ್ಯೋಗ ಸೃಷ್ಟಿಗೆ ಸಂಬಂಧಿಸಿದ ಅವಕಾಶ ಮತ್ತು ಉತ್ತೇಜನಗಳು ನಿಧಾನಗತಿ ಪಡೆದಿವೆ. ಗ್ವಾಟೆಮಾಲದ ಶೇಕಡ ೯೦ರಷ್ಟು, ಬೆಲಾರಸ್ ಮತ್ತು ಜಾಂಬಿಯಾದ ಶೇಕಡ ೮೦ಕ್ಕೂ ಹೆಚ್ಚಿನ ಕೈಗಾರಿಕಾ ಘಟಕಗಳು ನಿಯಂತ್ರಣದ ಅರ್ಥವನ್ನು ಊಹಾತೀತ ಎಂದು ಭಾವಿಸುತ್ತವೆ.

ಬಾಂಗ್ಲಾ ದೇಶದ ಶೇಕಡ ೮೦ಕ್ಕೂ ಹೆಚ್ಚಿನ ಹಾಗೂ ಇಕ್ವೆಡಾರ್ ಮತ್ತು ಮಾಲ್ಡೋವಾದ ಶೇಕಡ ೭೦ಕ್ಕೂ ಹೆಚ್ಚಿನ ಕೈಗಾರಿಕಾ ಘಟಕಗಳು, ತಮ್ಮ ಆಸ್ತಿ ಹಕ್ಕುಗಳನ್ನು ರಕ್ಷಿಸುವಲ್ಲಿ ದೇಶದ ನ್ಯಾಯ ವ್ಯವಸ್ಥೆಯಲ್ಲಿ ವಿಶ್ವಾಸವನ್ನೇ ಹೊಂದಿಲ್ಲ. ವರದಿ ಕಂಡುಕೊಂಡಿರುವಂತೆ, ನೀತಿ ಸಂಬಂಧಿತ ಖಚಿತ ಭವಿಷ್ಯ ಸೂಚಿಗಳು ಹೊಸ ಬಂಡವಾಳ ಹೂಡಿಕೆಯ ಸಂಭಾವ್ಯತೆಯನ್ನು ಶೇಕಡ ೩೦ರಷ್ಟು ಹೆಚ್ಚಿಸಬಲ್ಲುದು.

ನೀತಿ ಸಂಬಂಧಿತ ವೆಚ್ಚಗಳು ಕೈಗಾರಿಕಾ ಘಟಕಗಳ ಪ್ರಮುಖ ಭಾಗವಾಗಿದ್ದು ಅನೇಕ ಸಂಭವನೀಯ ಬಂಡವಾಳ ಹೂಡಿಕೆಯನ್ನು ನಷ್ಟದೆಡೆಗೆ ಕೊಂಡೊಯ್ಯಬಲ್ಲುದು. ವಿಶ್ವ ಬ್ಯಾಂಕಿನ "ಡೂಯಿಂಗ್ ಬ್ಯುಸಿನೆಸ್ ೨೦೦೫" ವರದಿಯು ಈ ತಿಂಗಳ ಮೊದಲ ಭಾಗದಲ್ಲಿ ಪ್ರಕಟಿತಗೊಂಡಿದ್ದು ಅಪ್ರಚಲಿತ ಅಥವಾ ಅಸಮರ್ಪಕ ನಿಯಂತ್ರಣಗಳಿಂದುಂಟಾಗುವ ಹೆಚ್ಚಿನ ವೆಚ್ಚವನ್ನು ಎತ್ತಿ ತೋರಿಸಿದೆ. "ವಿಶ್ವ ಅಭಿವೃದ್ಧಿ ವರದಿ ೨೦೦೫" ತೋರುವಂತೆ ದೊಡ್ಡ ಸಮಸ್ಯೆಯ ಪ್ರಮುಖ ಭಾವವಾಗಿದೆ.

ನಂಬಲರ್ಹವಾದ ವಿದ್ಯುತ್ ಪೂರೈಕೆ ಮತ್ತು ಇತರೇ ಮೂಲಭೂತ ಸೌಕರ್ಯಗಳು, ಅಪರಾಧ ಮತ್ತು ಭ್ರಷ್ಟಾಚಾರದಂತಹ ದೋಷಗಳು ನಿಯಂತ್ರಣದ ದ್ವಿಗುಣ ಮಟ್ಟದಲ್ಲಿ ವೆಚ್ಚವನ್ನು ಹೇರುತ್ತವೆ. ಈ ಅಂಶಗಳೊಡನೆ ದುರ್ಬಲವಾದ ಒಪ್ಪಂದಗಳ ಅನುಷ್ಠಾನ ಹಾಗೂ ದುರ್ಭರ ನಿಯಂತ್ರಣಗಳು ಸೇರಿ ಮಾರಾಟದ ಶೇಕಡ ೨೫ ಭಾಗದಷ್ಟು ವೆಚ್ಚವನ್ನು ಹೆಚ್ಚಿಸುತ್ತವೆ. ಇದು ಕೈಗಾರಿಕಾ ಘಟಕಗಳು ಸಾಮಾನ್ಯವಾಗಿ ಪಾವತಿಸುವ ತೆರಿಗೆಯ ಪ್ರಮಾಣದ ತ್ರಿಗುಣಕ್ಕಿಂತ ಹೆಚ್ಚಾಗಿದೆ. ಖಚಿತವಾದ ವಿದ್ಯುತ್ ಪೂರೈಕೆ ಇರ ಕಾರಣ, ಎರಿಟ್ರಿಯಾ, ಭಾರತ ಮತ್ತು ಕೀನ್ಯಾ ದೇಶದಲ್ಲಿ ಶೇಕಡ ೧೦ರಷ್ಟು ಮಾರಾಟದ ವೆಚ್ಚ ಹೆಚ್ಚುತ್ತಿದೆ. ಅರ್ಮೇನಿಯ, ಅಜರ್‌ಬೈಜಾನ್ ಮತ್ತು ಪೆರು ದೇಶದಲ್ಲಿ ಅಪರಾಧಗಳ ಕಾರಣದಿಂದ ಮಾರಾಟದ ಶೇಕಡ ೧೦ರಷ್ಟು ಪ್ರಮಾಣದ ವೆಚ್ಚ ಏರುತ್ತಿದೆ. ಅಲ್ಜೀರಿಯಾ, ಕಾಂಬೋಡಿಯಾ ಮತ್ತು ನಿಕರಗುವಾ ದೇಶದಲ್ಲಿ ಭ್ರಷ್ಟಾಚಾರದಿಂದಾಗಿ ಶೇಕಡ ೬ರಷ್ಟು ವೆಚ್ಚ ಹೆಚ್ಚಾಗಿದೆ.

ಸ್ಪರ್ಧಾತ್ಮಕತೆಗೆ ಇರುವ ಅಡೆತಡೆಗಳು ವ್ಯಾಪಕವಾಗಿ ಹರಡಿವೆ. ನಿರಂತರ ಅಭಿವೃದ್ಧಿಗೆ ಪ್ರಮುಖವಾಗಿರುವ ಕೈಗಾರಿಕಾ ಘಟಕಗಳಿಗೆ ನೀಡುವ ನಿರುತ್ಸಾಹಕ ಉತ್ತೇಜನ ಮತ್ತು ಉತ್ಪಾದಕತೆ ಹೆಚ್ಚಿಸುವ ಕ್ರಮಗಳು ಕಳಪೆಯಾಗಿವೆ. ಹೆಚ್ಚಿನ ಅಪಾಯ ಮತ್ತು ವೆಚ್ಚಗಳು ಸ್ಪರ್ಧಾತ್ಮಕತೆಯನ್ನು ಮಿತಿಗೊಳಿಸುತ್ತದೆ. ಸರಕಾರಗಳು ತಮ್ಮ ನೀತಿಗಳ ಅರೆಕೊರೆಯಿಂದಾಗಿ ಸ್ಪರ್ಧಾತ್ಮಕತೆಯನ್ನು ಮೊಟಕುಗೊಳಿಸುತ್ತವೆ. ಸರಕಾರಗಳು ಮಾರುಕಟ್ಟೆಯಲ್ಲಿನ ಪ್ರವೇಶ ಹಾಗೂ ನಿರ್ಗಮನವನ್ನು, ಕೈಗಾರಿಕಾ ಘಟಕಗಳ ಅನೈಚ್ಛಿಕ ಸ್ಪರ್ಧಾತ್ಮಕ ವರ್ತನೆಯನ್ನು ತಡೆಯಲು ತಮ್ಮ ಅಸಮರ್ಪಕ ಪ್ರಯತ್ನಗಳಿಂದ ಮುಂದುವರಿಯುತ್ತಿವೆ. ಪೋಲ್ಯಾಂಡ್‌ನ ಶೇಕಡ ೯೦ಕ್ಕೂ ಹೆಚ್ಚಿನ ಕೈಗಾರಿಕೆಗಳು ಬಲವದ ಸ್ಪರ್ದಾತ್ಮಕ ಒತ್ತಡವನ್ನು ವರದಿ ಮಾಡಿವೆ. ಇದು ಜಾರ್ಜಿಯ ಕೈಗಾರಿಕೆಗಳ ಎರಡರಷ್ಟು ಪ್ರಮಾಣದಲ್ಲಿದೆ. ವರದಿ ಕಂಡುಕೊಂಡಿರುವಂತೆ ಬಲವಾದ ಸ್ಪರ್ಧಾತ್ಮಕ ಒತ್ತಡಗಳು ನವಾನ್ವೇಷಣೆಯ ಸಂಭಾವ್ಯತೆಯನ್ನು ಶೇಕಡ ೫೦ಕ್ಕೂ ಹೆಚ್ಚಿನ ಪ್ರಮಾಣದಲ್ಲಿ ಹೆಚ್ಚಿಸುತ್ತದೆ.

ನೀತಿ ಸಂಬಂಧಿತ ಅಪಾಯಗಳು, ವೆಚ್ಚಗಳು ಮತ್ತು ಸ್ಪರ್ಧಾತ್ಮಕತೆಗೆ ಇರುವ ಅಡೆತಡೆಗಳು ಮಟ್ಟ ಮತ್ತು ರಚನೆಯು ವಿವಧ ದೇಶಗಳ ನಡುವೆ ಮಾತ್ರವಲ್ಲದೆ ನಿರ್ದಿಷ್ಟ ದೇಶದ ಒಳಗೂ ಬೇರೆ ಬೇರೆ ರೂಪದಲ್ಲಿದೆ. ಇದು ಬ್ರೆಜಿಲ್, ಚೈನಾ ಮತ್ತು ಭಾರತದಲ್ಲಿನ ರಾಜ್ಯ ಮತ್ತಿ ಪ್ರದೇಶಗಳಲ್ಲಿ ಮಾತ್ರವಲ್ಲದೆ ಸಣ್ಣ ರಾಷ್ಟ್ರಗಳಲ್ಲೂ ಸತ್ಯವಾಗಿದೆ. ರಾಷ್ಟ್ರೀಯ ಹಾಗೂ ಪ್ರಾದೇಶಿಕ ಸರಕಾರಗಳು ಬಂಡವಾಳ ಹೂಡಿಕೆ ವಾತಾವರಣ ನಿರ್ಮಿಸುವಲ್ಲಿ ತಮ್ಮದೇ ಆದ ವಿಶಿಷ್ಟ ಪಾತ್ರ ಹೊಂದಿವೆ.

ಕಳಪೆ ಮಟ್ಟದ ಬಂಡವಾಳ ಹೂಡಿಕೆ ವಾತಾವರಣ ಸಣ್ಣ ಕೈಗಾರಿಕಾ ಉದ್ದಿಮೆಗಳ ಮೇಲೆ ಪ್ರಭಾವ ಬೀರಿದೆ. ಅನೌಪಚಾರಿಕ ಅರ್ಥವ್ಯವಸ್ಥೆಯಲ್ಲಿ ಇದು ಇನ್ನೂ ಗಾಢವಾಗಿದೆ. ವರದಿ ಎತ್ತಿ ತೋರುವಂತೆ ಈ ಕೈಗಾರಿಕಾ ಘಟಕಗಳು ಹಣಕಾಸು ಮತ್ತು ಸಾರ್ವಜನಿಕ ಸೇವೆಗಳ ಉಪಲಬ್ಧತೆ ಪಡೆಯಲು ದುರ್ಲಭವಾಗಿದೆ. ಇವು ನ್ಯಾಯ ವ್ಯವಸ್ಥೆಯಲ್ಲಿ ಕ್ಷೀಣ ವಿಶ್ವಾಸವನ್ನು ಹೊಂದಿವೆ ಹಾಗೂ ನಿಯಂತ್ರಣದ ಅರ್ಥ ವ್ಯಾಪ್ತಿಯನ್ನು ಅರ್ಥ ಮಾಡಿಕೊಳ್ಳಲಾರದ ವಾತಾವರಣ ಇದೆ. ಸ್ಥಿರ ವೆಚ್ಚದಂತಹ ಅಡೆತಡೆಗಳು– ಉದಾ: ಸ್ವಯಂ–ವಿದ್ಯುತ್ ಉತ್ಪಾದನಾ ಘಟಕಗಳ ಸ್ಥಾಪನೆಯ ಅವಶ್ಯಕತೆ– ಸಣ್ಣ ಕೈಗಾರಿಕಾ ಘಟಕಗಳ ಮೇಲೆ ಹೆಚ್ಚಿನ ವೆಚ್ಚವನ್ನು ಹೇರುತ್ತವೆ.

ಅಭಿವೃದ್ಧಿ ಸಾಧಿಸಲು ಔಪಚಾರಿಕ ನೀತಿಗಳ ಬದಲಾವಣೆಗಿಂತ ಹೆಚ್ಚಿನ ಅವಶ್ಯಕತೆ ಇದೆ.

"ಶೇಕ ೯೦ಕ್ಕಿಂತ ಹೆಚ್ಚಿನ ಕೈಗಾರಿಕಾ ಘಟಕಗಳು ನೀತಿ ಮತ್ತ ಅನುಷ್ಠಾನದಲ್ಲಿ ಅಂತರ ಇರುವುದನ್ನು ವರದಿ ಮಾಡಿವೆ. ಅನೇಕ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಅರ್ಧಕ್ಕಿಂತ ಹೆಚ್ಚಿನ ಉತ್ಪಾದನೆ ಅನೌಪಚಾರಿಕ ಆರ್ಥಿಕ ವ್ಯವಸ್ಥೆಯಿಂದ ದೊರೆಯುತ್ತದೆ. ಸರಕಾರಗಳು ಈ ಅಂತರವನ್ನು ಕಡಿಮೆ ಮಾಡಬೇಕಿದೆ ಅಲ್ಲದೆ ಬಂಡವಾಳ ಹೂಡಿಕೆ ವಾತಾವರಣವನ್ನು ನಿರ್ಮಿಸುವಲ್ಲಿ ಹೆಚ್ಚಿನ ಆಳವಾದ ನೀತಿಗಳನ್ನು ಶೋಧಿಸಬೇಕಿದೆ." ಎಂದು ವರದಿಯ ಪ್ರಮುಖ ಲೇಖಕರಾದ ವಾರಿಕ್ ಸ್ಮಿತ್ ಹೇಳುತ್ತಾರೆ.

ಬಂಡವಾಳ ಹೂಡಿಕೆ ವಾತಾವರಣವನ್ನು ಸುಧಾರಿಸಲು ಕಾನೂನು ಹಾಗೂ ನೀತಿಗಳಲ್ಲಿ ಬದಲಾವಣೆಯ ಅವಶ್ಯಕತೆ ಇದೆ. ಸರಕಾರಗಳು ಈ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತರಾಗುವುದಕ್ಕೆ ವರದಿಯು ನಾಲ್ಕು ಆಳವಾದ ಸವಾಲುಗಳನ್ನು ಎತ್ತಿ ತೋರಿಸಿದೆ.

- ಎಲ್ಲ ರೂಪಗಳ ಭ್ರಷ್ಟಾಚಾರದ ನಿಯಂತ್ರಣ. ಅಭಿವೃದ್ಧಿಶೀಲ ದೇಶಗಳಲ್ಲಿನ ಹೆಚ್ಚಿನ ಕೈಗಾರಿಕಾ ಘಟಕಗಳು ಅಧಿಕಾರಿಗಳೊಂದಿಗೆ ವ್ಯವಹರಿಸುವಾಗ ಲಂಚ ನೀಡುವರು. ಇದನ್ನು ಅನೇಕರು ತಮ್ಮ ಆದ್ಯ ತೊಂದರೆ ಎಂದು ಭಾವಿಸುತ್ತಾರೆ.

- ಸರಕಾರದ ನೀತಿಗಳ ವಿಶ್ವಾಸಾರ್ಹತೆಯ ನಿರ್ಮಾಣ. ಹೊಸ ಕಾನೂನುಗಳ ಅನುಷ್ಠಾನ ಸಮರ್ಪಕವಾಗಿರದಿದ್ದರೆ ಅವುಗಳ ಜಾರಿಯಿಂದ ಹೆಚ್ಚಿನ ಪರಿಣಾವನ್ನೇ ಸಾಧಿಸಲಾಗದು. ರಾಜಕೀಯ ಸಂಪರ್ಕ ಹೊಂದಿದ ಕೈಗಾರಿಕಾ ಘಟಕಗಳು ನೀತಿಗಳು ಹಾಗೂ ಅದರ ಅನುಷ್ಠಾನವನ್ನು ವಿರೂಪಗೊಳಿಸುತ್ತಾರೆ.

- ನೀತಿ ಸುಧಾರಣೆಗಾಗಿ ಜನಮತದ ಕ್ರೋಢಿಕರಣ. ಹೆಚ್ಚಿನ ಉತ್ಪಾದಕ ಸಮಾಜವನ್ನು ನಿರ್ಮಿಸಲು ಸಾರ್ವಜನಿಕ ಪ್ರೋತ್ಸಾಹದ ನಿರ್ಮಾಣದಲ್ಲಿ ವಿಫಲತೆ, ಸುಧಾರಣೆಗಳನ್ನು ಮತ್ತು ಅವುಗಳ ನಿರಂತರತೆಗೆ ಭಂಗ ತರುತ್ತವೆ.

- ಸ್ಥಳೀಯ ಅಗತ್ಯಗಳಿಗನುಗುಣವಾಗಿ ನೀತಿಗಳ ಪರಾಮರ್ಶೆ. ಬೇರೆ ದೇಶಗಳಲ್ಲಿನ ವಿಧಾನಗಳನ್ನು ಯಥಾ ರೀತಿಯಲ್ಲಿ ಅನುಕರಿಸುವುದು ಅನೇಕ ಬಾರಿ ಕಳಪೆ ಫಲಿತಾಂಶ ನೀಡುತ್ತವೆ.

ಮೂಲಭೂತ ಸಂಗತಿಗಳ ವಿತರಣೆಗೆ ಒತ್ತು :

ಸರಕಾರಗಳು, ಉತ್ತಮ ಬಂಡವಾಳ ಹೂಡಿಕೆ ವಾರಾವರಣಕ್ಕೆ ಅವಶ್ಯವಾಗಿರುವ ಮೂಲಭೂತ ಸಂಗತಿಗಳ ಸುಧಾರಣೆಗೆ ಒತ್ತು ನೀಡಬೇಕು. ಇದು ಎಲ್ಲ ಕೈಗಾರಿಕಾ ಘಟಕಗಳಿಗೂ ಲಾಭ ತರಬಲ್ಲುದು. ವರದಿಯು ನಾಲ್ಕು ಪ್ರಮುಖ ವಲಯಗಳಲ್ಲಿನ ಅನುಭವದ ಪಾಠವನ್ನು ಅವಲೋಕಿಸುತ್ತದೆ.

- ಸ್ಥಿರತೆ ಮತ್ತು ಸುರಕ್ಷತೆ : ಆಸ್ತಿ ಹಕ್ಕುಗಳ ಭದ್ರತೆಯ ಉತ್ತಮ ಬಂಡವಾಳ ಹೂಡಿಕೆ ವಾತಾವರಣದ ಕೇಂದ್ರ ಅಂಶವಾಗಿದೆ. ಪೋಲ್ಯಾಂಡ್, ರುಮೇನಿಯಾ, ರಷ್ಯಾ, ಸ್ಲೋವೆಕಿಯ ಮತ್ತು ಉಕ್ರೇನ್ ದೇಶಗಳಲ್ಲಿನ, ತಮ್ಮ ಲಾಭದ ಶೇಕಡ ೧೪ರಿಂದ ೪೦ರ್ಟು ಭಾಗವನ್ನು, ಹೀಗೆ ನಂಬದಿರುವ ಕೈಗಾರಿಕ ಘಟಗಳಿಗಿಂತ ಹೆಚ್ಚಾಗಿ ಮರುಹೂಡಿಕೆ ಮಾಡಿವೆ. ಭೂಮಿಯ ಒಡೆತನದ ಹಾಗೂ ಇತರೆ ಆಸ್ತಿಯ ಹಕ್ಕಿನ ವಿಚಾರಣೆ, ಒಪ್ಪಂದದ ಅನುಷ್ಠಾನದ ಸುಧಾಋಣೆ, ಅಪರಾಧಗಳ ನಿಯಂತ್ರಣ, ಸರಕಾಋದ ನಿಯಮಿತ ಸ್ವಾಮ್ಯಗಳ ಮೂಲಕ ಆಸ್ತಿ ಹಕ್ಕುಗಳ ಭದ್ರತೆಯನ್ನು ತರಬಹುದು.

- ನಿಯಂತ್ರಣ ಮತ್ತು ತೆರಿಗೆ: ಇದು ಉತ್ತಮ ಬಂಡವಾಳ ಹೂಡಿಕೆ ಮತ್ತು ಇತರೇ ಸಾಮಾಜಿಕ ಉದ್ದೇಶಗಳಿಗ ಉತ್ತಮ ಕೊಡುಗೆ ನೀಡಬಲ್ಲುದು. ಆದರೆ ಅನೇಕ ಬಾರಿ ಅನುಸರಿಸುವ ವಿಧಾನದಿಂದಾಗಿ ಅನವಶ್ಯಕ ಅಪಾಯಗಳು, ವೆಚ್ಚಗಳು ಮತ್ತು ಸ್ಪರ್ಧಾತ್ಮಕ ವಾತಾವರಣಕ್ಕೆ ಅಡೆತಡೆಗಳು ನಿರ್ಮಾಣವಾಗುತ್ತವೆ. ಇದು ಅನೌಪಚಾರಿಕ ಆರ್ಥಿ ವ್ಯವಸ್ಥೆಯಲ್ಲಿ ಅಸ್ಥಿರತೆ ಉಂಟು ಮಾಡುತ್ತವೆ. ಯಶಸ್ವಿ ಸುಧಾರಣೆಗಳು ನಿಯಂತ್ರಣಗಳ ಪದ್ಧತಿಯನ್ನು ನೇರಗೊಳಿಸುವುದಾಗಿದೆ. ಉದಾಹರಣೆಗೆ ಉಗಾಂಡ, ವಿಯಟ್ನಾಂನಲ್ಲಿನ ಸುಧಾರಣೆಗಳು, ಮೊರಾಕ್ಕೊ ಮತ್ತು ಘಾನಾದಲ್ಲಿನ ಸುಂಕ ಆಡಳಿತದ ಸುಧಾರಣೆಗಳು ಇತ್ಯಾದಿ.

- ಹಣಕಾಸು ಮತ್ತು ಮೂಲಭೂತ ಸೌಕರ್ಯಗಳು : ಇವು ಬಂಡವಾಳ ಹೂಡಿಕೆಯ ಚಟುವಟಿಕೆಗಳ ಬಹುಮುಖ್ಯ ಅಂಶಗಳು. ಈ ಸೇವೆಗಳನ್ನು ಪೂರೈಸುವ ವತ್ತಿಪರರಿಂದ ಸರಕಾರಗಳು ಉತ್ತಮ ಫಲಿತಾಂಶ ಪಡೆಯುತ್ತಿವೆ.

- ಕಾರ್ಮಿಕರು ಮತ್ತು ಶ್ರಮ ಮಾರುಕಟ್ಟೆ : ಉತ್ತಮ ಬಂಡವಾಳ ಹೂಡಿಕೆಯು ಜನರು ಉಚಿತವಾದ ಉದ್ಯೋಗವನ್ನು ಪಡೆಯಲು ನೆರವಾಗುತ್ತದೆ. ಸರಕಾರಗಳು ಕುಶಲ ಕಾರ್ಮಿಕರ ನಿರ್ಮಾಣಕ್ಕೆ ಒತ್ತು ಕೊಡಬೇಕಲ್ಲದೆ ಶ್ರಮ ಮಾರುಕಟ್ಟೆಯಲ್ಲಿನ ಸರಕಾರದ ಹಸ್ತಕ್ಷೇಪ ಎಲ್ಲ ಕಾರ್ಮಿಕರಿಗೂ ಒಳಿತವನ್ನು ತರುವಂತೆ ನೋಡಿಕೊಳ್ಳಬೇಕು. (ಪ್ರಸ್ತುತ ಅನೌಪಚಾರಿಕ ಆರ್ಥಿಕ ವ್ಯವಸ್ಥೆಯಲ್ಲಿ ಇರುವವರು ಮತ್ತು ಅರೆ ಉದ್ಯೋಗಿಗಳಾಗಿರುವವನ್ನು ಒಳಗೊಂಡಂತೆ.)ಸರಕಾರಗಳು ನಿತ್ಯ ಬದಲಾಗುವ ಆರ್ಥಿಕ ವ್ಯವಸ್ಥೆಗೆ ಕಾರ್ಮಿಕರನ್ನು ತಯಾರು ಮಾಡು ಪ್ರಯತ್ನ ಮಾಡಬೇಕು.

ವರದಿಯು ಎಚ್ಚರಿಸುವಂತೆ ಯಾವುದೇ ನಿರ್ದಿಷ್ಟ ಕೈಗಾರಿಕೆಯನ್ನು ಉದ್ದೇಶಿಸಿ ರೂಪಿಸುವ ವಿಶೇಷ ನೀತಿಗಳು ಅಪಾಯಕಾರಿಯಾಗಿವೆ.

“ಸರಕಾರಗಳು ಶತಮಾನಗಳಿಂದ ಆಯ್ದ ಹಸ್ತಕ್ಷೇಪಗಳ ಮೂಲಕ ಪ್ರಯೋಗ ನಡೆಸುತ್ತಿವೆ. ಆದರೆ ಅಂತರರಾಷ್ಟ್ರೀಯ ಅನುಭವವು ಈ ತಂತ್ರಗಳನ್ನು ಅಲ್ಲಗಳೆದಿವೆ– ಮತ್ತು ಈ ಬಗೆಯ ಹಸ್ತಕ್ಷೇಪಗಳು ದೋಷವೆಂದು ತೋರುವ ಅನೇಕ ಉದಾಹಣೆಗಳಿವೆ” ಎಂದು ಮೈಕೆಲ್ ಕ್ಲೀನ್, ವಿಶ್ವಬ್ಯಾಂಕ್/ಅಂತರರಾಷ್ಟ್ರೀಯ ಹಣಕಾಸು ನಿಗಮದ ಉಪಾಧ್ಯಕ್ಷ– ಖಾಸಗಿ ವಲಯ ಅಭಿವೃದ್ದಿ ಮತ್ತು ಐಎಫ್‌ಸಿ ಯ ಪ್ರಧಾನ ಆರ್ಥಿಕ ತಜ್ಞರ ವರದಿಯು ವಿವಿಧ ಶ್ರೇಣಿಗಳ ವಿಧಾನಗಳ ಅನುಭವವನ್ನು ಅವಲೋಕಿಸುತ್ತದೆ ಹಾಗೂ ಈ ಕಾರ್ಯತಂತ್ರಗಳಲ್ಲಿ ಅಡಗಿರುವ ಅಪಾಯಗಳನ್ನು ಕಡಿಮೆಗೊಳಿಸುವ ನಿರ್ದೇಶನವನ್ನು ನೀಡುತ್ತವೆ.

## ಪರಿಪೂರ್ಣತೆಯಲ್ಲ, ದೀರ್ಘಪ್ರಯತ್ನದ ಅವಶ್ಯಕತೆ.

ಚೈನಾ, ಭಾರತ ಮತ್ತು ಉಗಾಂಡ ದೇಶಗಳ ಯಶಸ್ಸನ್ನು ಉದ್ಧರಿಸುತ್ತಾ ವರದಿಯು ಎಲ್ಲವನ್ನೂ ಒಮ್ಮೆಲೇ ಪ್ರಯತ್ನಿಸಬೇಕೆಂದೇನಿಲ್ಲ ಎಂದು ಒತ್ತಿ ಹೇಳುತ್ತದೆ ಬದಲಿಗೆ, ಕೈಗಾರಿಕಾ ಘಟಕಗಳು ಎದುರಿಸುವ ತೊಂದರೆಗಳನ್ನು ಗಮನಿಸಿ ಕಾರ್ಯ ಪ್ರವೃತ್ತರಾಗುವುದು ಮುಖ್ಯವೆಂದು ವರದಿ ಹೇಳುತ್ತದೆ. ಜೊತೆಗೆ ಸುಧಾರಣೆಗಳ ನಿರಂತರ ಮುಂದುವರಿಕೆ ಪ್ರಮುಖವಾದ ಅಂಶವಾಗಿದೆ. ಆಸ್ತಿ ಹಕ್ಕುಗಳನ್ನು ಸುಧಾರಿಸುವ ನಿಟ್ಟನಲ್ಲಿ ಚೈನಾ ಅನುಸರಿಸಿದ ಪ್ರಕ್ರಿಯೆ ೪೦೦ ದಶಲಕ್ಷ ಜನಗಳನ್ನು ಬಡತನದಿಂದ ಪಾರುಮಾಡಿದೆ. ಪ್ರಾರಂಭದ ಸುಧಾರಣೆಯ ನಂತರ ಮುಂದುವರಿದ ಬದಲಾವಣೆಗಳು ಬಂಡವಾಳ ಹೂಡಿಕೆಯ ವಾತಾವರಣವನ್ನು ಉತ್ತಮಗೊಳಿಸಲು ಸಹಕಾರಿಯಾಗಿದೆ.

ಏಕೆಂದರೆ, ದೇಶದಾದ್ಯಂತ ಕೈಗಾರಿಕ ಘಟಕಗಳ ತೊಂದರೆಗಳು ಅನೇಕ ಬಗೆಯದ್ದಾಗಿರಬಹುದು. ಒಂದೇ ಪ್ರದೇಶದಲ್ಲಿ ಕೂಡ ಆದ್ಯತೆಗಳನ್ನು ಪ್ರತಿಯೊಂದು ಘಟಕದ ಆಧಾರದ ಮೆಲೆ ಮಾಡಬೇಕಾಗುತ್ತದೆ. ಸುಧಾರಣೆಗಳ ತೀವ್ರತೆಯನ್ನು ಕಾಪಾಡಲು ಸೇನೆಗಲ್, ಟರ್ಕಿ ಮತ್ತು ವಿಯೆಟ್ನಾಂನಂತಹ ವಿವಿಧ ಬಗೆಯ ದೇಶಗಳು ವಿಶೇಷ ಸಂಸ್ಥೆಗಳನ್ನು ಹುಟ್ಟುಹಾಕಿವೆ. ಪ್ರಗತಿಯ ನಿರಂತರತೆಗೆ ಪರಿಣಾಮಕಾರಿ ಸಾರ್ವಜನಿಕ ಮಾಹಿತಿ ಸಂಪರ್ಕವು ಬಹುಮುಖ್ಯವಾಗಿದೆ.

## ಅಂತರರಾಷ್ಟ್ರೀಯ ಸಮುದಾಯ ಹೆಚ್ಚಿನ ಸಹಾಯ ಮಾಡಬೇಕಿದೆ

ಬಂಡವಾಳ ಹೂಡಿಕೆ ವಾತಾವರಣದ ಸುಧಾರಣೆಯಿಂದುಂಟಾದ ಅಭಿವೃದ್ಧಿ ಮತ್ತು ಬಡತನ ನಿರ್ಮೂಲನೆಗಳು ಅಂತರರಾಷ್ಟ್ರೀಯ ಸಹಾಯಧನದ ಪರಿಣಾವನ್ನು ಗೌಣವಾಗಿಸಬಲ್ಲುರುದು. ವರದಿಯು, ಅಭಿವೃದ್ದಿಶೀಲ ದೇಶಗಳಲ್ಲಿನ ಬಂಡವಾಳ ಹೂಡಿಕೆಯ ವಾತಾವರಣದ ಸುಧಾರಣೆಗೆ ಅಂತರರಾಷ್ಟ್ರೀಯ ಸಮುದಾಯಕ್ಕೆ ಕರೆ ನೀಡಿದೆ. ಕರೆಯ ಮುಖ್ಯಾಂಶ ಈ ಕೆಳಗಿನಂತಿದೆ.

- ಆಭಿವೃದ್ಧಿ ಹೊಂದಿದ ದೇಶಗಳಲ್ಲಿ ಪ್ರಚಲಿತ ಇರುವ ವ್ಯಾಪಾರದ ನಿರ್ಬಂಧಗಳ ನಿರ್ಮೂಲನೆ, ಸಬ್ಸಿಡಿಗಳ ನಿರ್ಮೂಲನೆ ಹಾಗೂ ಇತರೆ ಮಾರುಕಟ್ಟೆ ಸಂಬಂಧಿ ವಿರೂಪಗಳ ನಿರ್ಮೂಲನೆ. ಇವು ಅಭಿವೃದ್ಧಿಶೀಲ ರಾಷ್ಟ್ರಗಳ ಬಂಡವಾಳ ಹೂಡಿಕೆ ವಾತಾವರಣದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತವೆ. ಈ ಬಗೆಯ ಕ್ರಮ ಸಹಾಯಧನಗಳಿಂದ ದೊರಕುವ ನಾಲ್ಕು ಪಟ್ಟು ಹೆಚ್ಚಿನ ಮೌಲ್ಯವನ್ನು ಈ ದೇಶಗಳಿಗೆ ದೊರಕಿಸುತ್ತದೆ.

- ಸರಕಾರಗಳು ಬಂಡವಾಳ ಹೂಡಿಕೆ ವಾರಾವರಣವನ್ನು ಸುಧಾರಿಸಲು ಪರಿಣಾಮಕಾರಿಯಾದ ಹೆಚ್ಚಿನ ಸಹಾಯ ನೀಡುವುದು. ನೀತಿ ಸುಧಾರಣಾ ಸಂಬಂಧಿ, ತಾಂತ್ರಿಕ ಸಹಾಯಗಳು ಅವುಗಳ ರಚನೆ ಮತ್ತು ಅನುಷ್ಠಾನದಲ್ಲಿ ಹೆಚ್ಚಿನ ಸಹಾಯ ಒದಗಿಸಬಲ್ಲವು.

- ನೀತಿ ಸುಧಾರಣ ರಚನೆ ಮತ್ತು ಅನುಷ್ಠಾನದಲ್ಲಿ, ನೀತಿ ನಿರೂಪಕರಿಗೆ ಹೆಚ್ಚಿನ ತರಬೇತಿ ಹಾಗೂ ಅಗಾಧ ಜ್ಞಾನ ನೀಡುವುದರ ಮೂಲಕ ಬಂಡವಾಳ ಹೂಡಿಕೆ ವಾತಾವರಣ ನಿರ್ಮಾಣದಲ್ಲಿ  ಒದಗಿಸಬೇಕಾಗಿದೆ.

---

ಜರ್ನಲಿಸ್ಟ್‌ಗಳು ವಿಶ್ವಬ್ಯಾಂಕ್ ಆನ್‌ಲೈನ್ ಮೀಡಿಯಾ ಬ್ರೀಫಿಂಗ್ ಸೆಂಟರ್‌ನ ಮೂಲಕ ಹಾಕಿರುವ ತಡೆ ಮುಗಿಯುವ ಮೊದಲು ಮಾಹಿತಿಗಾಗಿ ಭೇಟಿ ನೀಡಬಹುದು:
http://media.worldbank.org/secure/

ಪಾಸ್‌ವರ್ಡ್ ಈಗಾಗಲೇ ಇಲ್ಲದ ಎಕ್ರೆಡಿಟೆಡ್ ಜರ್ನಲಿಸ್ಟ್‌ಗಳು, ಕೆಳಗೆನೀಡಿದ ಸೈಟ್‌ನಲ್ಲಿ ಲಭ್ಯವಿರುವ ಫಾರ್ಮನ್ನು ತುಂಬಿಸಿ ಪಾಸ್‌ವರ್ಡ್‌ಗಾಗಿ ಅರಿಕೆ ಮಾಡಬಹುದು:
http://media.worldbank.org/
ವರದಿ ಹಾಗೂ ಸಂಬಂಧಿತ ಮಾಹಿತಿಗಳು ಜನಸಾಮಾನ್ಯರಿಗೆ ವರ್ಲ್ಡ್ ವೈಡ್ ವೆಬ್‌ನಲ್ಲಿ ತಡೆ ಮುಗಿದ ಕೂಡಲೇ ಲಭ್ಯವಿದೆ :
http://www.worldbank.org/wdr2005